ಹಿರಿಯರಿಗೆ, ಮಕ್ಕಳಿಗೆ ಈ ಬಗ್ಗೆ ತಿಳಿ ಹೇಳಬೇಕು.

- ಎಸ್ಸೆಮ್ಮೆಸ್, ಇ–ಮೇಲ್ ಮೂಲಕ ಬರುವ ಯಾವುದೇ ಲಿಂಕ್‌ಗಳನ್ನು ಸರಿಯಾಗಿ ಗಮನಿಸದೆ ಕ್ಲಿಕ್ ಮಾಡಬೇಡಿ. ಈ ಲಿಂಕ್‌ಗಳಲ್ಲಿ ನಮ್ಮ ಮೊಬೈಲ್ ಫೋನ್‌ನಲ್ಲಿರುವ ಮಾಹಿತಿ ಕದಿಯುವ ಕುತಂತ್ರಾಂಶಗಳು ಇರಬಹುದು. ಕ್ಲಿಕ್ ಮಾಡಿದ ತಕ್ಷಣ ಅವು ನಮ್ಮ ಕಂಪ್ಯೂಟರ್ ಅಥವಾ ಮೊಬೈಲ್‌ಗೆ ಇನ್‌ಸ್ಟಾಲ್ ಆಗಿ, ಅದರಲ್ಲಿರುವ ಬ್ಯಾಂಕಿನ ಲಾಗಿನ್, ಪಾಸ್‌ವರ್ಡ್ ಮುಂತಾದ ಖಾಸಗಿ ಮಾಹಿತಿ ಕದ್ದು ರವಾನಿಸಬಹುದು.
- 'ಆಧಾರ್ ಅಪ್‌ಡೇಟ್ ಮಾಡಿ, ಬ್ಯಾಂಕ್ ಖಾತೆ ಸರಿಯೇ ದೃಢೀಕರಿಸಿ' ಎಂದು ಬರುವ ಲಿಂಕ್‌ಗಳನ್ನಾಗಲೀ, ಕರೆಗಳನ್ನಾಗಲೀ ನಂಬಲೇಬೇಡಿ. ಲಿಂಕ್‌ಗಳು ಅಥವಾ ಪುಟಗಳು ಬ್ಯಾಂಕಿನ ವೆಬ್‌ಸೈಟನ್ನೇ ಹೋಲುತ್ತವೆಯಾದರೂ, ಬ್ಯಾಂಕುಗಳೆಂದಿಗೂ ಈ ರೀತಿ ಲಿಂಕ್ ಕಳುಹಿಸಿ ಅಪ್‌ಡೇಟ್ ಮಾಡಲು ಕೇಳುವುದಿಲ್ಲ. ಫೋನ್ ಕೂಡ ಮಾಡುವುದಿಲ್ಲ. ಏನೇ ಇದ್ದರೂ ಬ್ಯಾಂಕ್ ಶಾಖೆಗೆ ಹೋಗಿಯೇ ಸರಿಪಡಿಸಿಕೊಳ್ಳಿ.
- ಒಟಿಪಿ ಮಾತ್ರವೇ ಅಲ್ಲ, ಆಧಾರ್ ಸಂಖ್ಯೆಯನ್ನೂ ಅಪರಿಚಿತರೊಂದಿಗೆ ಯಾವುದೇ ಕಾರಣಕ್ಕೂ ಹಂಚಿಕೊಳ್ಳಬೇಡಿ. ಆ ಸಂಖ್ಯೆಯನ್ನಿಟ್ಟುಕೊಂಡು, ನಮ್ಮ ಸಿಮ್ ಕಾರ್ಡನ್ನು ನಿಷ್ಕ್ರಿಯಗೊಳಿಸಬಹುದು; ಹೊಸ ಸಿಮ್ ಪಡೆದು, ಅದರ ಮೂಲಕ ಒಟಿಪಿ ಬಳಸಿ ಬ್ಯಾಂಕ್ ಖಾತೆಗೆ ಕನ್ನ ಹಾಕುವ ಖದೀಮರೂ ಇರುತ್ತಾರೆ.
- ಕೆವೈಸಿ (Know Your Customer – ನಿಮ್ಮ ಗ್ರಾಹಕನನ್ನು ತಿಳಿದುಕೊಳ್ಳಿ) ಎಂಬ ಹೆಸರಿನಲ್ಲಿಯೂ ಫೋನ್ ಕರೆಗಳು, ಲಿಂಕ್‌ಗಳು ಬರುತ್ತವೆ. ಅವುಗಳನ್ನು ನಿರ್ಲಕ್ಷಿಸಿ. ಏನಿದ್ದರೂ ಬ್ಯಾಂಕ್ ಖಾತೆಗೆ ಅಥವಾ ಸಂಬಂಧಿತ ಕಚೇರಿಗೆ ಹೋಗಿಯೇ ಕೆವೈಸಿ ಮಾಡಿಸಿಕೊಳ್ಳಿ.
- ಮೊಬೈಲ್ ಫೋನ್‌ನಲ್ಲಿ ಧುತ್ತನೇ ಪಾಪ್‌ಅಪ್ ಆಗುವ ವಿಂಡೋಗಳನ್ನು ಕುತೂಹಲದಿಂದ ಕ್ಲಿಕ್ ಮಾಡಲು ಹೋಗಬೇಡಿ.
- '5 ಜಿಬಿ ಉಚಿತ ಡೇಟಾ ಪಡೆಯಲು ಇಲ್ಲಿ ಕ್ಲಿಕ್ ಮಾಡಿ' ಎಂಬ ಮಾದರಿಯ ಯಾವುದೇ ಸಂದೇಶಗಳು ನಕಲಿ. ಅಂಥ ಸಂದೇಶಗಳನ್ನು ಓಪನ್ ಮಾಡಬೇಡಿ ಹಾಗೂ ಅವುಗಳನ್ನು ಫಾರ್ವರ್ಡ್ ಮಾಡಲೂ ಹೋಗದಿರಿ.
- ಹಬ್ಬಗಳು ಬಂದಾಗ, ನಮ್ಮ ಹೆಸರು ತೋರಿಸಿ ಶುಭಾಶಯ ಕಳುಹಿಸಲು ಸುಲಭವಾಗಿಸುವ ಅದೆಷ್ಟೋ ನಕಲಿ ವೆಬ್‌ಸೈಟುಗಳ ಲಿಂಕುಗಳು ಹರಿದಾಡುತ್ತಿವೆ. 'ಇಲ್ಲಿ ಕ್ಲಿಕ್ ಮಾಡಿ, ಅಚ್ಚರಿ ನೋಡಿ' ಅಂತೆಲ್ಲ ಸಂದೇಶಗಳಿರುತ್ತವೆ. ಅವುಗಳಲ್ಲಿ ಹೆಚ್ಚಿನವು ನಮ್ಮ ಐಡೆಂಟಿಟಿ ಕಳವು ಮಾಡಿ, ಖಾಸಗಿ ಮಾಹಿತಿ ಸಂಗ್ರಹಿಸುವ ಜಾಲತಾಣಗಳು ಎಂಬುದು ನೆನಪಿರಲಿ.
- ಸೈಬರ್ ಸೆಂಟರ್‌ಗಳಲ್ಲಿ ಅಥವಾ ಸಾರ್ವಜನಿಕ ಬಳಕೆಯ ಕಂಪ್ಯೂಟರುಗಳಲ್ಲಿ ಆನ್‌ಲೈನ್ ಹಣಕಾಸು ವ್ಯವಹಾರ ಮಾಡಲೇಬೇಡಿ. ಅಲ್ಲಿ ಎಲ್ಲವೂ ಸುರಕ್ಷಿತ ಎನ್ನುವಂತಿಲ್ಲ.
- ಯಾವುದೇ ಆನ್‌ಲೈನ್ ಖಾತೆಗೆ ಊಹಿಸಲಾರದ, ಪ್ರಬಲವಾದ ಪಾಸ್‌ವರ್ಡ್ ಬಳಸಿ ಮತ್ತು ಅದನ್ನು ಆಗಾಗ್ಗೆ ಬದಲಿಸುತ್ತಾ ಇರಿ. ಈಗ ಒಂದು ಸಂಖ್ಯೆ, ಒಂದು ವಿಶೇಷ ಅಕ್ಷರ, ಕ್ಯಾಪಿಟಲ್ ಅಕ್ಷರ ಇವುಗಳನ್ನು ಕಡ್ಡಾಯ ಮಾಡಿರುವುದೇ ಈ ರೀತಿಯ ಪ್ರಬಲ ಸುರಕ್ಷತೆಗಾಗಿ.
- ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್, ಪಾನ್, ಆಧಾರ್ ಈ ಸಂಖ್ಯೆಗಳನ್ನು, ಅದರ ಪಿನ್/ಪಾಸ್‌ವರ್ಡ್‌ಗಳನ್ನು ಯಾರೊಂದಿಗೂ ಹಂಚಿಕೊಳ್ಳದಿರಿ.
- ಕಂಪ್ಯೂಟರ್ ಸಾಧನಗಳಿಗೆ ಸಮರ್ಥವಾದ ಆ್ಯಂಟಿವೈರಸ್ ತಂತ್ರಾಂಶವಿರಲಿ. ಜೊತೆಗೆ ಅದರ ತಂತ್ರಾಂಶಗಳನ್ನು, ಕಾರ್ಯಾಚರಣಾ ವ್ಯವಸ್ಥೆಯ ಅಪ್‌ಡೇಟ್‌ಗಳನ್ನು ಅಳವಡಿಸಿಕೊಳ್ಳಲೇಬೇಕು.
- ಬ್ರೌಸರ್ ಎಕ್ಸ್‌ಟೆನ್ಷನ್‌ಗಳು, ಆ್ಯಪ್‌ಗಳನ್ನು ಇನ್‌ಸ್ಟಾಲ್ ಮಾಡಿಕೊಳ್ಳುವಾಗ ಅವುಗಳ

